ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.42/2023

| | | | |
|---|---|---|---|
| ಹೆಸರು | : | ಶಶಿಧರ್ | ಸಿ .ಡಬ್ಲ್ಯೂ :4 |
| ತಂದೆ ಹೆಸರು | : | ಶಿವಣ್ಣ | ಪಿ .ಡಬ್ಲ್ಯೂ :7 |
| ವಯಸ್ಸು | : | 23 ವರ್ಷ | |
| ಉದ್ಯೋಗ | : | ವ್ಯವಸಾಯ | |
| ವಾಸಸ್ಥಳ | : | ನಿಟ್ಟೂರು | |

ಸಾಕ್ಷಿಯನ್ನು ದಿಃ09-06-2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ಚಾಸಾ -1 ನನ್ನ ತಂದೆ . ಚಾಸಾ -2 , 3 , 5 ಮತ್ತು 6 ನನಗೆ ಗೊತ್ತು .

ದಿಃ 03-06-2022 ರಂದು ಬೆಳಗ್ಗೆ 9.00 ಗಂಟೆಗೆ ಚಾಸಾ -1 ರವರು ನನಗೆ ಕರೆ ಮಾಡಿ ಜಮೀನಿನ ಬಳಿ ಗಲಾಟೆ ನಡೆಯುತ್ತಿದೆ ಎಂದು ಹೇಳಿದರು . ಆ ನಂತರ ನನ್ನನ್ನು ನಿಟ್ಟೂರು ಬಸ್ ನಿಲ್ದಾಣದ ಬಳಿಗೆ ಬರಬೇಕೆಂದು ಹೇಳಿದರು . ನಾನು ಬಸ್ ನಿಲ್ದಾಣದ ಬಳಿಗೆ ಹೋಗಿದ್ದೆ . ಅಲ್ಲಿ ನೋಡಲಾಗಿ ನನ್ನ ತಂದೆ ಬಾಯಲ್ಲಿ ಮತ್ತು ತಲೆಯಲ್ಲಿ ರಕ್ತ ಸುರಿಯುತ್ತಿತ್ತು . ನಾನು ಗುಬ್ಬಿ ಸರ್ಕಾರಿ ಆಸ್ಪತ್ರೆಗೆ ಅವರನ್ನು ಕರೆ ತಂದು ಚಿಕಿತ್ಸೆ ಕೊಡಿಸಿದ್ದೇನೆ . ನಂತರ ಗುಬ್ಬಿ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿದ್ದೇವೆ .ನನ್ನ ತಂದೆಯ ಬಳಿ ಏನಾಯಿತು ಎಂದು ವಿಚಾರಿಸಲಾಗಿ ಅವರು ನಿಟ್ಟೂರಿನಲ್ಲಿರುವ ನಮ್ಮ ಜಮೀನಿನಲ್ಲಿ ಬೆಳಗ್ಗೆ 8.45 ಗಂಟೆಗೆ ನೀರು ಹಾಯಿಸಲು ಹೋಗಿದ್ದೆ . ಆ ಸಮಯ ಆರೋಪಿತರುಗಳು ಅಲ್ಲಿಗೆ ಟ್ರ್ಯಾಕ್ಟರ್ ತೆಗೆದುಕೊಂಡು ಹೋಗಿದ್ದಾರೆ . ನನ್ನ ತಂದೆ ನೀರು ಹಾಯಿಸಿದ್ದೇನೆ ಎಂದು ಹೇಳಲಾಗಿ ಆರೋಪಿತರುಗಳು ಅವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಮತ್ತು ಹಲ್ಲೆ ಮಾಡಿದ್ದಾರೆ . 2 ನೇ ಆರೋಪಿತರು ದೊಣ್ಣೆಯಿಂದ ನನ್ನ ತಂದೆಯ ತಲೆಯ ಮೇಲೆ ಹಲ್ಲೆ ಮಾಡಿದ್ದಾರೆ . 1 ,3 ಹಾಗೂ 4 ನೇ ಆರೋಪಿತರುಗಳು ನನ್ನ ತಂದೆಗೆ ಬಾಯಿಯ ಮೇಲೆ ಹಲ್ಲೆ ಮಾಡಿದ್ದಾರೆ . ಆರೋಪಿತರುಗಳು ನನ್ನ ತಂದೆಯನ್ನು ಕುರಿತು ಅವರಿಗೆ ಕಲ್ಲುಕಟ್ಟಿ ಬಾವಿಗೆ ಎಸೆಯಿರಿ ಎಂದು ಜೀವ ಬೆದರಿಕೆ ಒಡ್ಡಿದ್ದಾರೆ . 2 ನೇ ಆರೋಪಿತರು ನನ್ನ ತಂದೆಯ ಮೇಲೆ ಹಲ್ಲೆ ಮಾಡಿದ ದೊಣ್ಣೆಯನ್ನು ನೋಡಿ ಗುರುತಿಸಿದ್ದಾರೆ . ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ಮು ಮಾ -1 ನ್ನು ನೋಡಿ ಗುರುತಿಸಿದ್ದಾರೆ . ಮೇಲಿನ ವಿಚಾರಗಳನ್ನು ತಿಳಿಸಿ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ .

ಆರೋಪಿತರುಗಳನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರುಗಳನ್ನು ನೋಡಿ ಗುರುತಿಸಿದ್ದಾರೆ .
(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಪ್ರಾಜ್ಞ ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು, ಅದರಂತೆ ಅನುಮತಿ ನೀಡಲಾಯಿತು.

<u>ಪಾಟೀಸವಾಲುಃ ಸ ಸ ಅ ರವರಿಂದಃ-</u>

ಆರೋಪಿತರುಗಳು ನಮ್ಮ ಜಮೀನಿಗೆ ಟ್ರ್ಯಾಕ್ಟರ್ ಚಲಾಯಿಸಿಕೊಂಡು ಅತಿಕ್ರಮ ಪ್ರವೇಶ ಮಾಡಿದ್ದಾರೆ ಎಂದರೆ ಸರಿ .

<u>ಪಾಟೀಸವಾಲು: ಆರೋಪಿ ಪರ ವಕೀಲರಿಂದಃ-</u> .

ಚಾಸಾ -3 ನನ್ನ ಮಾವ ಎಂದರೆ ಸರಿ . ಚಾಸಾ -2 ನನ್ನ ಸಂಬಂಧಿಕರು ಎಂದರೆ ಸರಿ . 2 ನೇ ಆರೋಪಿತರು ನನ್ನ ಚಿಕ್ಕಪ್ಪನ ಮಗ ಎಂದರೆ ಸರಿ . ನಮ್ಮ ಮತ್ತು ಆರೋಪಿತರುಗಳ ನಡುವೆ ಹಿಂದಿನಿಂದಲೂ ಜಮೀನಿಗೆ ಕುರಿತು ಮನಸ್ತಾಪ ಇದೆ ಎಂದರೆ ಸರಿಯಲ್ಲ . ಆರೋಪಿತರುಗಳ ಜಮೀನಿನ ಮೂಲಕ ನಮ್ಮ ಜಮೀನಿಗೆ ಹೋಗಬೇಕೆಂದರೆ ಸರಿಯಲ್ಲ . ಮೇಲೆ ಹೇಳಿದ ಸ್ವತ್ತು ನಮಗೆ ಸೇರಿದ್ದು ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ . ನಿಟ್ಟೂರಿನ ಸರ್ವೆ ನಂ.213 ರಲ್ಲಿ ನನಗಾಗಲೀ ನನ್ನ ತಂದೆಗಾಗಲೀ ಸ್ವತ್ತು ಇಲ್ಲ ಎಂದರೆ ವಿಭಾಗದ ಮೂಲಕ ಬಂದಿದೆ ಇನ್ನು ಖಾತೆಯಾಗಿಲ್ಲ ಎಂದು ತಿಳಿಸಿದ್ದಾರೆ . ಸರ್ವೆ ನಂ. 213/5 ರ ಸ್ವತ್ತು ರದ್ರಣಮ್ಮ ರವರ ಹೆಸರಿನಲ್ಲಿದೆ ಎಂದರೆ ಸಾಕ್ಷಿಯು ನನ್ನ ತಾತ ಅದನ್ನು ಖರೀದಿಸಿದ್ದಾರೆ , ನನ್ನ ದೊಡ್ಡಪ್ಪ ಇನ್ನು ನಮಗೆ ಖಾತೆ ಮಾಡಿಸಿಕೊಟ್ಟಿಲ್ಲ ಎಂದು ತಿಳಿಸಿದ್ದಾರೆ . ನನ್ನ ತಾತ ಸ್ವತ್ತನ್ನು ಖರೀದಿಸಿದ್ದಾರೆ ಎಂದು ತೋರಿಸಲು ನ್ಯಾಯಾಲಯಕ್ಕೆ ಕ್ರಯ ಪತ್ರವನ್ನು ಹಾಜರುಪಡಿಸಿಲ್ಲ, ಸಾಕ್ಷಿಯು ಮುಂದುವರೆದು ಅಸಲು ದಾಖಲೆಗಳೆಲ್ಲವೂ ನಮ್ಮ ದೊಡ್ಡಪ್ಪನ ಹತ್ತಿರ ಇವೆ ಎಂದು ತಿಳಿಸಿದ್ದಾರೆ .

ಮೇಲೆ ಹೇಳಿದ ದಿನಾಂಕದಂದು ನನ್ನ ತಂದೆ ಕರೆ ಮಾಡಿದಾಗ ನಾನು ಬಾಗೂರಿನಲ್ಲಿದ್ದೆ . ನಾನು ನನ್ನ ತಂದೆ ಕರೆ ಮಾಡಿದ 5-10 ನಿಮಿಷದಲ್ಲಿ ನಿಟ್ಟೂರಿನ ಬಸ್ ನಿಲ್ದಾಣದ ಬಳಿಗೆ ಹೋಗಿದ್ದೇನೆ . ನಾನು ಹೇಳುವಂತೆ ಆರೋಪಿತರುಗಳು ನನ್ನ ತಂದೆಯ ಮೇಲೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ . ನಿಟ್ಟೂರಿನಲ್ಲಿ ಸರ್ಕಾರಿ ಆಸ್ಪತ್ರೆ ಇದೆ ಎಂದರೆ ಸರಿ . ನಿಟ್ಟೂರಿನಲ್ಲಿ ಆಸ್ಪತ್ರೆ ಇದ್ದರೂ ಸಹಾ ನಾನು ನನ್ನ ತಂದೆಯನ್ನು ಗುಬ್ಬಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು ಹೇಳುವಂತೆ 2 ನೇ ಆರೋಪಿತರು ನನ್ನ ತಂದೆಗೆ ಮು ಮಾ

-1 ರಿಂದ ಹಲ್ಲೆ ಮಾಡಿಲ್ಲ , 1,3 ಮತ್ತು 4 ನೇ ಆರೋಪಿತರುಗಳು ನನ್ನ ತಂದೆಯ ಬಾಯಿಯ ಮೇಲೆ ಹಲ್ಲೆ ಮಾಡಿಲ್ಲ , ಅವಾಚ್ಯ ಶಬ್ದಗಳಿಂದ ನಿಂದಿಸಿಲ್ಲ , ಜೀವ ಬೆದರಿಕೆ ಒಡ್ಡಿಲ್ಲ ಎಂದರೆ ಸರಿಯಲ್ಲ . ಆರೋಪಿತರುಗಳು ಯಾವ ಕಂಪನಿಯ ಟ್ರ್ಯಾಕ್ಟರ್ ನಲ್ಲಿ ಬಂದಿದ್ದರು ಎಂದು ಗೊತ್ತಿಲ್ಲ . ಆರೋಪಿತರುಗಳು ಯಾವ ದಿಕ್ಕಿನಿಂದ ನಮ್ಮ ಸ್ವತ್ತಿಗೆ ಅತಿಕ್ರಮ ಪ್ರವೇಶ ಮಾಡಿದರು ಎಂದು ದೂರಿನಲ್ಲಿ ಬರೆಸಿಲ್ಲ . ಮು ಮಾ -1 ನ್ನು ನಾವೇ ಠಾಣೆಗೆ ತೆಗೆದುಕೊಂಡು ಹೋಗಿ ನೀಡಿದ್ದೇವೆ ಎಂದರೆ ಸರಿಯಲ್ಲ . ನಾನು ಹೇಳುವಂತಹ ಯಾವುದೇ ಘಟನೆ ನಡೆಯದಿದ್ದರೂ ಸಹಾ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನನ್ನ ತಂದೆ ದ್ವಿ ಚಕ್ರ ವಾಹನದಲ್ಲಿ ಹೋಗುವಾಗ ಬಿದ್ದು ಗಾಯಗೊಂಡಿದ್ದಾರೆ , ಅದನ್ನು ಆರೋಪಿತರುಗಳ ಮೇಲಿನ ದ್ವೇಷದಿಂದ ಅವರು ಹಲ್ಲೆ ಮಾಡಿದ್ದರಿಂದ ಉಂಟಾಗಿರುವ ಗಾಯಗಳೆಂದು ಹೇಳಿದ್ದಾರೆ ಎಂದರೆ ಸರಿಯಲ್ಲ . ನಾನು ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ .
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
(ಅನುಪಮ.ಡಿ )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.